<u>ಸಾಕ್ಷಿಯನ್ನು ದಿಃ**05.01.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಡಿ.ಎಸ್.ವಕೀಲರಿಂದ:</u>

ನನ್ನ ಪೂರ್ವಜರು ಮತ್ತು ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು. ಕೋಲಾರ ಜಿಲ್ಲೆಯಲ್ಲಿ ವ್ಯವಸಾಯ ಮಾಡುತ್ತಿದ್ದರು. ನಾನು ಕುಣಿಗಲ್ ಗೆ ಬಂದ ನಂತರ ವ್ಯವಸಾಯವು ಮಾಡಿಸುತ್ತಿದ್ದೆ ಮತ್ತು ಚಿನ್ನದ ವ್ಯಾಪಾರ ಸಹ ಮಾಡುತ್ತಿದ್ದೆ. 1 ನೇ ಪ್ರತಿವಾದಿ ವಕೀಲರಾಗಿದ್ದು ನನಗೆ ಅವರ ಪರಿಚಯವಿರುತ್ತದೆ. 2 ಮತ್ತು 3 ನೇ ಪ್ರತಿವಾದಿರವರು ಒಂದೇ ಕುಟುಂಬದವರು ಇರುವುದರಿಂದ ಎಲ್ಲರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ನಾನು ಈ ದಾವೆಯನ್ನು 4 ಆಸ್ತಿಗಳ ಸಲುವಾಗಿ ಹೂಡಿರುತ್ತೇನೆ. 35/2, 4 ಗುಂಟೆ ಇರುತ್ತದೆ. ಅದರ ಚೆಕ್ಕು ಬಂದಿ ಪೂರ್ವಕ್ಕೆಃ ಬೇಗೂರು ರಸ್ತೆ, ಪಶ್ಚಿಮಕ್ಕೆಃ ನನ್ನದೇ ಆಸ್ತಿ, ಅದರ ಸರ್ವೇ ನಂ.28/7 ಇರುತ್ತದೆ. ಸದರಿ ಆಸ್ತಿಯನ್ನು ನಾನು ಖರೀದಿ ಮಾಡಿರುತ್ತೇನೆ. ಉತ್ತರಕ್ಕೆಃ ಪ್ರಮೀಳಾರವರ ಜಮೀನು ಇರುತ್ತದೆ. ದಕ್ಷಿಣಕ್ಕೆಃಬಜ್ಜಯ್ಯ ಮತು ಕರೆಕಲ್ಲು ಇರುತ್ತದೆ. 2 ನೇ ಐಟಂ. ಆಸ್ತಿ 35/3, 6 ಗುಂಟೆ ಇರುತ್ತದೆ. ಎಲ್ಲಾ ಆಸ್ತಿಗಳು ಒಂದೇ ಬೌಂಡರಿ ಇರುವುದರಿಂದ ಮೇಲೆ ಹೇಳಿದ ಚೆಕ್ಕು ಬಂದಿಯೇ ಇದಕ್ಕೂ ಇರುತ್ತದೆ.

ಪೂರ್ವ ದಿಕ್ಕಿನಲ್ಲಿರುವ ಬೇಗೂರು ರಸ್ತೆ ಸುಮಾರು 30 ಅಡಿ ಇರಬಹುದು. ಅದು ಬಿ.ಎಂ. ರಸ್ತೆಯಿಂದ ಪ್ರಾರಂಭವಾಗುತ್ತದೆ. ಆದರೆ, ಎಲ್ಲಿ ಹೋಗುತ್ತದೆ ಎಂದು ಗೊತ್ತಿಲ್ಲ. ಸದರಿ ರಸ್ತೆಯಲ್ಲಿ ಎಲ್ಲಾ ವಾಹನಗಳು ಓಡಾಡುತ್ತವೆ ಎಂದರೆ ಸರಿ. ನಮ್ಮ ಜಮೀನು ಮತ್ತು ಪ್ರತಿವಾದಿರವರ ಜಮೀನಿನ ಮಧ್ಯದಲ್ಲಿ ಸದರಿ ಬೇಗೂರು ರಸ್ತೆ ಇರುತ್ತದೆ.

This is a True Copy of the Court Records Online. Authenticated @ districts.ecourtsindia.com/cnr/KATK510018602016/truecopy/order-4.pdf

www.ecourtsindia.com

ಪ್ರತಿವಾದಿರವರ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ. ಪ್ರತಿವಾದಿರವರು ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಅಸಲು ದಾವಾ ನಂ. 18/2023 ಎಂಬ ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ವಿರುದ್ಧ ತಡೆಯಾಜ್ಞೆ ಆದೇಶವನ್ನು ಕೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು 2 ನೇ ಪ್ರತಿವಾದಿರವರನ್ನು ವೈಯಕ್ತಿಕವಾಗಿ ನೋಡಿರಬಹುದು. ಆದರೆ, ಗುರುತಿಸಲು ಆಗುವುದಿಲ್ಲ. ಪ್ರತಿವಾದಿರವರು 1996 ರಲ್ಲಿ ನನ್ನ ಸ್ವಾಧೀನಕ್ಕೆ ತೊಂದರೆ ಕೊಡಲು ಬಂದಿದ್ದರಿಂದ ಈ ದಾವೆಯನ್ನು ಹೂಡಿರುತ್ತೇನೆ. ಪ್ರತಿವಾದಿರವರು ಹೊಡೆದಾಡಲು ಬಂದಿರುತ್ತಾರೆ. ನನ್ನ ಸ್ವಾಧೀನಕ್ಕೆ ತೊಂದರೆ ಕೊಡುವ ಉದ್ದೇಶದಿಂದ ಹೊಡೆದಾಡಲು ಬಂದಿರುತ್ತಾರೆ.

ದಾವಾ ಆಸ್ತಿಗಳನ್ನು ನಾನು ಶಿವಣ್ಣರವರಿಂದ ದಿನಾಂಕಃ18.08.1992 ರಲ್ಲಿ ಖರೀದಿ ಮಾಡಿರುತ್ತೇನೆ. ಸದರಿ ಕ್ರಯ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ ಸದರಿ ಕ್ರಯ ಪತ್ರದಲ್ಲಿರುವ ಚೆಕ್ಕು ಬಂದಿಮತುತ ದಾವೆಯಲ್ಲಿ ನಮೂದಿಸಿರುವ ಚೆಕ್ಕು ಬಂದಿ ಎರಡೂ ಒಂದೇ ಆಗಿರುತ್ತದೆ. ಶಿವಣ್ಣರವರಿಂದ ಖರೀದಿ ಮಾಡಿರುವ ಸಮಯದಲ್ಲಿ ಅವರು ಖರೀದಿ ಮಾಡಿದ ದಾಖಲೆ ಪತ್ರ, ಪಹಣಿಗಳನ್ನು ಮತ್ತು ಕಂದಾಯ ರಶೀದಿಗಳನ್ನು ನೋಡಿರುತ್ತೇನೆ. ಎಂ.ಆರ್. ದಾಖಲೆ ಪಡೆದಿರುವ ಬಗ್ಗೆ ನೆನಪಿಲ್ಲ. ಶಿವಣ್ಣರವರು ದಾವಾ ಆಸ್ತಿಗಳನ್ನು ಖರೀದಿ ಮಾಡಿದ 2 ವರ್ಷಗಳಲ್ಲಿ ನನಗೆ ಮಾರಾಟ ಮಾಡಿರುತ್ತಾರೆ. ದಾವಾ ಆಸ್ತಿಗಳನ್ನು ಖರೀದಿ ಮಾಡುವ ಪೂರ್ವದಲ್ಲಿ ನಾನು ದಾವಾ

This is a True Copy of the Court Records Online. Authenticated @ districts.ecourtsindia.com/cnr/KATK510018602016/truecopy/order-4.pdf

www.ecourtsindia.com

www.ecourtsindia.com



ಆಸ್ತಿಯ ಬಳಿ ಹೋಗಿರುತ್ತೇನೆ. ಆಗ ಯಾವುದೇ ಬೆಳೆ ಇರಲಿಲ್ಲ. ಬರಡು ಭೂಮಿ ಆಗಿತ್ತು.

ದಾವಾ ಆಸ್ತಿಯನ್ನು ಖರೀದಿ ಮಾಡಿದ ನಂತರ ದಾವಾ ಆಸ್ತಿಗಳ ದುರಸ್ತು ಅಥವಾ ಸರ್ವೇ ಕಾರ್ಯ ಮಾಡಿಸಿರುತ್ತೇನೋ ಇಲ್ಲವೋ ನನಗೆ ನೆನಪಿಲ್ಲ. ಸರ್ವೇಯರ್ ದಾವಾ ಆಸ್ತಿಯ ಬಳಿ ಬಂದ ಹಾಗೆ ನನಗೆ ನೆನಪಿಲ್ಲ. 1 ನೇ ಪ್ರತಿವಾದಿಗೆ ಸರ್ವೇ ನಂ.35/2 ರಲ್ಲಿ 12 ¼ ಗುಂಟೆ ಜಮೀನು ಇರಬಹುದು. 1 ನೇ ಪ್ರತಿವಾದಿಗೆ ಸರ್ವೇ ನಂ.34/1 ಎ 2, 36/1 ಮತ್ತು 35/3 ರಲ್ಲಿ ಜಮೀನು ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಆಸ್ತಿಗಳನ್ನು ಭೂ ಪರಿವರ್ತನೆ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿರುವುದರ ಬಗ್ಗೆ ನನಗೆ ನೆನಪಿಲ್ಲ. 1 ನೇ ಪ್ರತಿವಾದಿ ಸರ್ವೇ ನಂ.35/2 ರಲ್ಲಿ ತನ್ನ ಜಮೀನನ್ನು ಭೂ ಪರಿವರ್ತನೆ ಮಾಡಿಕೊಳ್ಳಲು ಪ್ರಯತ್ನ ಮಾಡಿರುತ್ತಾರೆ ಅದಕ್ಕೆ ನಾನು ತಕರಾರು ಸಲ್ಲಿಸಿರುತ್ತೇನೆ. ಆ ಸಮಯದಲ್ಲೇ ನಮ್ಮ ನಡುವೆ ಗಲಾಟೆ ಆಗಿರುತ್ತದೆ ಎಂದರೆ ಹಿಂದೆ ಮುಂದು ಆಗಿರುತ್ತದೆ ಎಂದು ನುಡಿಯುತ್ತಾರೆ.

ಸರ್ವೇ ನಂ.35/2 ಒಟ್ಟು 1 ಎಕರೆ 9 ಗುಂಟೆ ಇದೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಅದರ ಚೆಕ್ಕು ಬಂದಿ ನನಗೆ ಗೊತ್ತಿಲ್ಲ. ನಾನು ದಾವಾ ಆಸ್ತಿಗಳನ್ನು ಖರೀದಿ ಮಾಡಿದ ನಂತರ 1 ನೇ ಪ್ರತಿವಾದಿಯ ತಂದೆ ಅವರ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. ನನ್ನ ವಾದಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ 5 ನೇ ಪ್ಯಾರಾದಲ್ಲಿ

This is a True Copy of the Court Records Online. Authenticated @ districts.ecourtsindia.com/cnr/KATK510018602016/truecopy/order-4.pdf

ಪ್ರತಿವಾದಿರವರು ಅಧಿಕಾರಿಗಳೊಂದಿಗೆ ಶಾಮೀಲಾಗಿ ಹೆಚ್ಚಿನ ವಿಸ್ತೀರ್ಣಕ್ಕೆ ಪಹಣಿಗಳನ್ನು ಮಾಡಿಸಿಕೊಂಡಿರುತ್ತಾರೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ಸದರಿ ಪಹಣಿಗಳನ್ನು ಪ್ರಶ್ನಿಸಿ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ. ಅದು ಪುರಸ್ಕೃತವಾಗಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿರವರು ನನ್ನ ಜಮೀನನ್ನು ಒತ್ತುವರಿ ಮಾಡಲು ಬಂದಿರುತ್ತಾರೆ. ಆದರೆ ನಾನು ಸ್ವಾಧೀನಾನುಭವದಲ್ಲಿರುತ್ತೇನೆ. ಅವರು ನನ್ನ ಜಮೀನನ್ನು ಒತ್ತುವರಿ ಮಾಡಿರುವುದಿಲ್ಲ. ಪ್ರತಿವಾದಿರವರು ನನ್ನ ಜಮೀನಿನ ಪೂರ್ವ ದಿಕ್ಕಿನಲ್ಲಿ ಬೇಲಿ ಹಾಕಲು ಪ್ರಯತ್ನ ಮಾಡಿರುತ್ತಾರೆ. ಪ್ರತಿವಾದಿರವರು ನನ್ನ ಗಮನಕ್ಕೆ ಬಾರದೇ ಪಹಣಿಗಳನ್ನು ಮಾಡಿಸಿಕೊಂಡ ನಂತರ ಬೇಲಿ ಹಾಕಲು ಪ್ರಯತ್ನ ಮಾಡಿರುತ್ತಾರೆ. ಅವರು ಕಲ್ಲು ಕಂಬದ ಬೇಲಿ ಹಾಕಲು ಬಂದಿರುತ್ತಾರೆ. ಎಷ್ಟು ಕಲ್ಲುಗಳನ್ನು ನೆಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಕಲ್ಲು ನೆಟ್ಟಲು ಬಂದಿರುತ್ತಾರೆ. ಆದರೆ, ನಾನು ಬಿಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಖರೀದಿ ಮಾಡಿದ ಕಾಲದಿಂದಲೂ ನನ್ನ ಹೆಸರಿಗೆ ಪಹಣಿ ಬಂದಿರುತ್ತದೆ. 1993-94 ರಲ್ಲಿ ನನ್ನ ಹೆಸರಿಗೆ ಪಹಣಿ ಬಂದಿರುತ್ತದೆ. 1992-93 ರಿಂದ ಈವರೆಗೂ ಪಹಣಿಗಳನ್ನು ಹಾಜರುಪಡಿಸಿರುತ್ತೇನೆ. ನಾನು 1992-94 ರವರೆಗಿನ ಪಹಣಿಗಳನ್ನು ಹಾಜರುಪಡಿಸದೆ ಇದ್ದರೂ ಸಹ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ನೀಡಿದ ದೂರಿನ ವಿಚಾರಗಳು ಸ್ವಲ್ಪ ನೆನಪಿರುತ್ತದೆ. ನಿಪಿ.57 ರಂತೆ

This is a True Copy of the Court Records Online. Authenticated @ districts.ecourtsindia.com/cnr/KATK510018602016/truecopy/order-4.pdf

ನಾನು ಪ್ರತಿವಾದಿರವರು ಕಲ್ಲು ಹಾಕಿ ತೊಂದರೆ ಕೊಡುತ್ತಿದ್ದಾರೆ ಎಂದು ಪಿರ್ಯಾದಿ ನೀಡಿರುತ್ತೇನೆ ಎಂದರೆ ಸರಿ. ಪ್ರತಿವಾದಿರವರು ನನ್ನ ಜಮೀನಿನ 2 ಅಡಿಗಿಂತ ಮೇಲೆ ಮುನ್ನುಗ್ಗಿ ಕಲ್ಲು ಕಂಬಗಳನ್ನು ಹಾಕಿರುತ್ತಾರೆ.

ಪ್ರತಿವಾದಿರವರು ಹಾಜರುಪಡಿಸಿರುವ ಪ್ರತಿವಾದ ಪತ್ರದ ವಿಚಾರಗಳು ನನಗೆ ನೆನಪಿಲ್ಲ. ಶಿವಣ್ಣರವರು ತಮ್ಮ ಅಣ್ಣ-ತಮ್ಮಂದಿರಿಂದ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. ಸದರಿ ರವರಿಗೆ ವಿಲ್ ಮುಖಾಂತರ ಆಸ್ತಿ ಬಂದಿರುತ್ತದೆ. ನಾನು ಕ್ರಯಕ್ಕೆ ಪಡೆಯುವ ಸಂದರ್ಭದಲ್ಲಿ ವಿಲ್ ನ್ನು ನೋಡಿರುತ್ತೇನೆ. ಈಗ ಸದರಿ ವಿಲ್ ನಿಮ್ಮ ಬಳಿ ಇದೆಯೇ ಎಂದರೆ ಸಾಕ್ಷಿಯು ನಾನು ಮನೆಗೆ ಹೋಗಿ ನೋಡಬೇಕು ಎಂದು ನುಡಿಯುತ್ತಾರೆ. ಇದೇ ನ್ಯಾಯಾಲಯದಲ್ಲಿ ನಾನು ರಮೇಶ್ ಎಂಬುವವರ ವಿರುದ್ಧ ಸರ್ವೇ ನಂ.35/3, 6 ಗುಂಟೆ ಸಲುವಾಗಿ ದಾವೆಯನ್ನು ಹೂಡಿರುತ್ತೇನೆ. ಅವರು ಸಹ ನನ್ನ ವಿರುದ್ಧ ದಾವೆಯನ್ನು ಹೂಡಿರುತ್ತಾರೆ. ನಾನು ಹಾಕಿರುವ ಕೇಸ್ ಚಾಲ್ತಿಯಲ್ಲಿರುತ್ತದೆ. ರಮೇಶ್ ಅವರು ಹಾಕಿದ ಕೇಸ್ ಸುಮಾರು ವರ್ಷಗಳ ಹಿಂದೆ ವಜಾ ಆಗಿರುತ್ತದೆ. ಸದರಿ ದಾವೆ ರಮೇಶ್ ರವರ ಪರ ಡಿಕ್ರಿ ಆಗಿದ್ದರು ಸಹ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾರಾಟಗಾರರಾದ ಶಿವಣ್ಣರವರಿಗೆ ದಾವಾ ಆಸ್ತಿಯ ವಿಸ್ತೀರ್ಣದಷ್ಟು ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ನಿಖರವಾಗಿ ಪರಿಶೀಲನೆ ಮಾಡದೆ ಖರೀದಿ ಮಾಡಿ ಈಗ ಸುಳ್ಳು ವಿಸ್ತೀರ್ಣ ನೀಡಿರುತ್ತೇನೆ ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KATK510018602016/truecopy/order-4.pdf

ಸರ್ವೇ ನಂ.35/2 ರಲ್ಲಿ ಕರಾಬು ಇರುತ್ತದೆ. ಅದು ಎಷ್ಟು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಆದರೆ ನಾನು ಖರೀದಿ ಮಾಡಿದ ಜಮೀನಿನಲ್ಲಿ ಕರಾಬು ಇರುವುದಿಲ್ಲ. ಯಾವ ಉದ್ದೇಶಕ್ಕಾಗಿ ಕರಾಬನ್ನು ಕಳೆದಿರುತ್ತಾರೆ ಎಂದು ಗೊತ್ತಿಲ್ಲ. ನಾನು ಎಂದೂ ಸಹ ಸರ್ವೇ ನಂ.35/2 ರ ಸ್ವಾಧೀನಾನುಭವದಲ್ಲಿ ಇಲ್ಲದೇ ಇರುವುದರಿಂದ ಅದರ ಕರಾಬು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ.35/2 ರಲ್ಲಿ ಒಟ್ಟು 1 ಎಕರೆ 14 ಗುಂಟೆ ಇದ್ದು, 5 ಗುಂಟೆ ಕರಾಬು ಇದ್ದು, ಉಳಿದ 1 ಎಕರೆ 9 ಜಮೀನಿನಲ್ಲಿ ಪ್ರತಿವಾದಿರವರು ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಎಲ್ಲ ವಿಚಾರಗಳು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.

This is a True Copy of the Court Records Online. Authenticated @ districts.ecourtsindia.com/cnr/KATK510018602016/truecopy/order-4.pdf